# ಕಲಿಕೆಗಾಗಿ ಹೊಸ ಹಾದಿ ತೆರೆಯೋಣ

# *ಮುನ್ನಡೆಯುವ*

BRIDGE MATERIALS FOR CLASS VII

**ತರಗತಿ – 7**

# ಸಮಾಜ ವಿಜ್ಞಾನ

**(SOCIAL SCIENCE)**

**ರಾಜ್ಯ ವಿದ್ಯಾಭ್ಯಾಸ ಸಂಶೋಧನೆ ತರಬೇತಿ ಸಮಿತಿ (ಎಸ್.ಸಿ.ಇ.ಆರ್.ಟಿ.)**

**ಕೇರಳ**

**2022**

ಆತ್ಮೀಯ ಮಕ್ಕಳೇ,

ಕಳೆದ ಎರಡು ಶೈಕ್ಷಣಿಕ ವರ್ಷಗಳಲ್ಲಿ (2020–21 ಮತ್ತು 2021–22) ಕೋವಿಡ್‌ನಿಂದಾಗಿ ಶಾಲೆಗಳನ್ನು ಸಂಪೂರ್ಣವಾಗಿ ತೆರೆಯಲಾಗಲಿಲ್ಲ. ಆದ್ದರಿಂದ ಪ್ರತಿ ತರಗತಿಯಲ್ಲಿ ಕಲಿಯಬೇಕಾದ ಆಶಯಗಳು ಮತ್ತು ಕೌಶಲ್ಯಗಳನ್ನು ಪಡೆದುಕೊಳ್ಳುವಲ್ಲಿ ಕೆಲವು ಲೋಪಗಳು ಕಂಡುಬಂದಿವೆ. ಕಾಲುವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳ ವಿಶ್ಲೇಷಣೆ ಮತ್ತು ಶಿಕ್ಷಕರೊಂದಿಗೆ ಸಂವಾದದ ಆಧಾರದ ಮೇಲೆ ಇದು ಕಂಡುಬಂದಿದೆ. ಪರಿಣಾಮಕಾರಿಯಾಗಿ ಮುಂದುವರಿದ ಶಿಕ್ಷಣವನ್ನು ಸಕ್ರಿಯಗೊಳಿಸಲು ಈ ಕಲಿಕೆಯ ಅಂತರವನ್ನು ಪರಿಹರಿಸುವುದು ಅತ್ಯಗತ್ಯ. ಪ್ರತಿ ತರಗತಿಯ ಪಾಠಗಳನ್ನು ಕಲಿಯುವ ಪೂರ್ವಜ್ಞಾನವನ್ನು ಖಚಿತಪಡಿಸಿಕೊಳ್ಳುವುದು ಉತ್ತಮ. ಇದು ಪ್ರತಿ ತರಗತಿಗೆ ಅಗತ್ಯವಾದ ಪೂರ್ವಜ್ಞಾನವನ್ನು ಖಚಿತಪಡಿಸಿಕೊಳ್ಳಲು ಚಟುವಟಿಕೆಗಳನ್ನು ಒಳಗೊಂಡಿರುವ ಕಿರು ಪುಸ್ತಕ ಆಗಿದೆ. ಆ ಪುಸ್ತಕದಲ್ಲಿನ ಚಟುವಟಿಕೆಗಳನ್ನು ನಿಮ್ಮ ಸ್ವಂತ ಅಥವಾ ಶಿಕ್ಷಕರ ಸಹಾಯದಿಂದ ಪೂರ್ಣಗೊಳಿಸಬೇಕು. ಕಲಿಕೆಯ ಅಂತರವನ್ನು ಪರಿಹರಿಸಲು ಮತ್ತು ನಿಮ್ಮ ಅಧ್ಯಯನವನ್ನು ಹೆಚ್ಚು ಆತ್ಮವಿಶ್ವಾಸದಿಂದ ಮುಂದುವರಿಸಲು ನಾನು ಬಯಸುತ್ತೇನೆ.

**ನಿರ್ದೇಶಕರು**

ಎಸ್.ಸಿ.ಇ.ಆರ್.ಟಿ.

**ಚಟುವಟಿಕೆ – 1.1**

**ಕಲಿಕಾ ಸಾಧನೆ**

1. ಅಕ್ಷಾಂಶ – ರೇಖಾಂಶ ರೇಖೆಗಳು ಭೂಮಧ್ಯರೇಖೆಯಿಂದ ಇರುವ ಕೋನೀಯ ಅಂತರವಾಗಿದೆಯೆಂದು ತಿಳಿದು ಚಿತ್ರೀಕರಿಸುವುದು.
2. ಅಕ್ಷಾಂಶ – ರೇಖಾಂಶ ರೇಖೆಗಳು ಉಪಯೋಗಿಸಿ ಭೂಮಿಯಲ್ಲಿ ಸ್ಥಾನನಿರ್ಣಯ ಮಾಡುವುದು.

**ಆಶಯಗಳು**

ತರಗತಿ – 6 ಯುನಿಟ್ – 5 ಭೂಮಿ ಕಥೆಯೂ ವಿಚಾರವೂ

ತರಗತಿ – 7 ಯುನಿಟ್ – 1 ಪರಿವರ್ತನೆಯ ಹಾದಿಯಲ್ಲಿ ಯುರೋಪು

ತರಗತಿ – 7 ಯುನಿಟ್ – 2 ವ್ಯಾಪಾರದಿಂದ ಅಧಿಕಾರಕ್ಕೆ

ತರಗತಿ – 7 ಯುನಿಟ್ – 6 ಭೂಪಟಗಳ ಅರ್ಥವನ್ನು ಹುಡುಕಿ

**ಚಟುವಟಿಕಾ ಪ್ಯಾಕೇಜ್**

**ಅಗತ್ಯವಾದ ಸಾಮಾಗ್ರಿಗಳು**

1. ಪ್ರಪಂಚ ಭೂಪಟ (ಔಟ್ ಲೈನ್) – ಗುಂಪಿಗೆ ಒಂದರಂತೆ (ಅನುಬಂಧ– 7.1)
2. ಅಟ್ಲಾಸ್ – ಗುಂಪಿಗೆ ಒಂದರಂತೆ
3. A4 ಪೇಪರ್
4. ಕಲರ್ ಪೆನ್ಸಿಲ್
5. ಡಬಲ್ ಸೈಡ್ ಗಂ ಟೇಪ್
6. ಭೂಖಂಡಗಳ ವಿಶೇಷತೆಗಳು (ಅನುಬಂಧ–7. 2)
7. ಭೂಖಂಡಗಳ ವಿಶೇಷತೆಗಳನ್ನು ಬರೆದ ಚೀಟಿಗಳು (ಅನುಬಂಧ –7. 3)

**ಚಟುವಟಿಕಾ ಪ್ರಕ್ರಿಯೆ**

ಮಕ್ಕಳನ್ನು ಆರು ಗುಂಪುಗಳಾಗಿ ಪ್ರಪಂಚ ಭೂಪಟ (ಔಟ್ ಲೈನ್) ನೀಡುವುದು. ಸಾಗರಗಳಿಗೆ ನೀಲಿ ಬಣ್ಣದಲ್ಲೂ ಭೂಖಂಡಗಳಿಗೆ ವ್ಯತ್ಯಸ್ಥ ಬಣ್ಣಗಳನ್ನೂ ಹಚ್ಚುವುದು. ಆರೂ ಗುಂಪುಗಳಿಗೆ ದೊಡ್ಡದಾದ ಒಂದೊಂದು ಪ್ರಪಂಚ ಭೂಪಟ (ರಾಜಕೀಯ ಭೂಪಟ) ವನ್ನು ನೀಡುವುದು. ಎರಡು ಮೀಟರ್ ಅಂತರ ದೂರದಿಂದ ಭೂಪಟಕ್ಕೆ ಕಾಯಿನ್ ಒಂದನ್ನು ಎಸೆಯುವುದು. ಕಾಯಿನ್ ಬಿದ್ದಂತಹ ಭೂಖಂಡಗಳನ್ನು ಅಧ್ಯಾಪಿಕೆ ಪಟ್ಟಿ ಮಾಡುವರು. ಭೂಖಂಡಗಳ ವಿಶೇಷತೆಗಳನ್ನು ಬರೆದ ಚೀಟಿಗಳನ್ನು ನೀಡುವುದು. ಪ್ರತಿ ಗುಂಪು ಒಂದೊಂದು ಚೀಟಿಯನ್ನು ಎತ್ತುವರು. ವಿಶೇಷತೆಗಳಿಂದ ಭೂಖಂಡವನ್ನು ಕಂಡುಕೊಳ್ಳುವರು. ಪ್ರತಿ ಭೂಖಂಡಗಳ ಹೆಚ್ಚಿನ ವಿಶೇಷತೆಗಳನ್ನು ಕಂಡುಕೊಂಡು ಟಿಪ್ಪಣಿ ತಯಾರಿಸುವರು.

| |
|---|
| ಅತೀ ದೊಡ್ಡ ಭೂಖಂಡ.<br>ನಮ್ಮ ದೇಶ ಭಾರತ ಈ ಭೂಖಂಡದಲ್ಲಿ ಒಳಗೊಳ್ಳುವುದು. |

| |
|---|
| ಈ ಭೂಖಂಡದ ಹೆಚ್ಚಿನ ಪ್ರದೇಶಗಳು ಮರುಭೂಮಿಯಾಗಿದೆ.<br>ನೈಲ್ ನದಿ ಈ ಭೂಖಂಡದ ಮೂಲಕ ಹರಿಯುವುದು. |

| |
|---|
| ವಿಶ್ವದಲ್ಲಿ ಅತೀ ಹೆಚ್ಚು ಗೋಧಿಯನ್ನು ಬೆಳೆಯುವುದು ಈ ಭೂಖಂಡದಲ್ಲಾಗಿದೆ.<br>ಪಂಚ ಮಹಾ ಸರೋವರಗಳು ಈ ಭೂಖಂಡದಲ್ಲಿದೆ. |

| |
|---|
| ಅಮೆಜೋನ್ ನದಿ ಈ ಭೂಖಂಡದಲ್ಲಿದೆ. |

ಈ ಭೂಖಂಡ ಮರಗೆಣಸಿನ ತಾಯ್ನಾಡಾಗಿದೆ.

ಜಗತ್ತಿನಲ್ಲಿ ಅತೀ ಹೆಚ್ಚು ಶೈತ್ಯವನ್ನು ಹೊಂದಿದ ಪ್ರದೇಶ.
ಶ್ವೇತ ಭೂಖಂಡ ಎಂದು ತಿಳಿಯಲ್ಪಡುತ್ತದೆ.


ಯುರಾಲ್ ಪರ್ವತ ಶ್ರೇಣಿಯು ಈ ಭೂಖಂಡವನ್ನು ಏಷ್ಯಾದಿಂದ ಪ್ರತ್ಯೇಕಿಸುವುದು.
ಕೈಗಾರಿಕೆಯಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿದೆ.

ಪ್ಲಾಟಿಪಸ್, ಕಾಂಗರೂ, ಡಿಂಕೋಕಲ್ ಮೊದಲಾದವು ಈ ಭೂಖಂಡದಲ್ಲಿ ಮಾತ್ರ ಕಾಣಸಿಗುತ್ತದೆ.
ದ್ವೀಪ ಭೂಖಂಡ ಎಂದು ತಿಳಿಯಲ್ಪಡುತ್ತದೆ.

## ಉತ್ಪನ್ನ

ಭೂಖಂಡಗಳ ವಿಶೇಷತೆಗಳು ಒಳಗೊಂಡ ಟಿಪ್ಪಣಿ.

## ಚಟುವಟಿಕೆ 1.2 : ವರ್ಕ್‌ಶೀಟ್ (ಅನುಬಂಧ – 7.4)




ವರ್ಕ್ ಶೀಟ್ ಪೂರ್ತಿಗೊಳಿಸುವುದಕ್ಕಾಗಿ ಭೂಪಟವನ್ನು ನಿರೀಕ್ಷಿಸುವರು. ಅಕ್ಷಾಂಶ ರೇಖಾಂಶ ರೇಖೆಗಳ ಕುರಿತು ಚರ್ಚಿಸಿ ಭೂಪಟ / ಗ್ಲೋಬ್ ನ ಸಹಾಯದಿಂದ ವರ್ಕ್ ಶೀಟ್ ಪೂರ್ತಿಗೊಳಿಸುವುದು.

**ವರ್ಕ್ ಶೀಟ್**

| A | B |
|---|---|
| ಭೂಮಿಯನ್ನು ಎರಡು ಅರ್ಧಗೋಳಗಳಾಗಿ ವಿಭಜಿಸುವ ಅಕ್ಷಾಂಶ ರೇಖೆ. | |
| ಭೂಮಧ್ಯ ರೇಖೆ ಹಾದು ಹೋಗುವ ಭೂಖಂಡ | |
| ಗ್ರೀನ್ವಿಚ್ ರೇಖೆ (0 ಡಿಗ್ರಿ ರೇಖಾಂಶರೇಖೆ) ಹಾದು ಹೋಗುವ ಭೂಖಂಡ. | |
| ಭೂಮಧ್ಯ ರೇಖೆಯ ಯಾವ ಭಾಗದಲ್ಲಿ ಅತೀ ಹೆಚ್ಚು ದೇಶಗಳು ಕಂಡುಬರುತ್ತದೆ. (ಮೇಲೆ/ಕೆಳಗೆ) | |
| ಉತ್ತರಾರ್ಧ ಗೋಳದಲ್ಲಿ ಮಾತ್ರ ಇರುವ ಭೂಖಂಡ | |
| ದಕ್ಷಿಣಾರ್ಧ ಗೋಳದಲ್ಲಿ ಮಾತ್ರ ಇರುವ ಭೂಖಂಡ | |
| ಎರಡೂ ಅರ್ಧಗೋಳದಲ್ಲಿ ಒಳಗೊಳ್ಳುವ ಭೂಖಂಡ | |
| ಪ್ರಧಾನ ಅಕ್ಷಾಂಶ ರೇಖೆಗಳಾದ ಭೂಮಧ್ಯರೇಖೆ, ಉತ್ತರಾಯಣ ರೇಖೆ ($23\frac{1}{2}^0$ ಉತ್ತರ ಅಕ್ಷಾಂಶ), ದಕ್ಷಿಣಾಯನ ರೇಖೆ ($23\frac{1}{2}^0$ದಕ್ಷಿಣ ಅಕ್ಷಾಂಶ), ಎಂಬಿವುಗಳು ಹಾದು ಹೋಗುವ ಭೂಖಂಡ | |
| ಭಾರತದ ಮೂಲಕ ಹಾದು ಹೋಗುವ ಪ್ರಧಾನ ಅಕ್ಷಾಂಶ ರೇಖೆ. | |
| ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಪ್ರಮುಖ ವಿದೇಶಿಗಳಾದ ಪೋರ್ಚುಗೀಸರು (ಪೋರ್ಚುಗಲ್), ಡಚ್ಚರು (ನೆದರ್ಲ್ಯಾಂಡ್), ಬ್ರಿಟೀಷರು (ಯು.ಕೆ), ಫ್ರೆಂಚರು (ಫ್ರಾನ್ಸ್) ಯಾವ ಭೂಖಡಕ್ಕೆ ಒಳಪಡುವರು? | |

## ಚಟುವಟಿಕೆ – 1.3

**ತರಗತಿ 7 – ಯುನಿಟ್ 1 : ಪರಿವರ್ತನೆಯ ಹಾದಿಯಲ್ಲಿ ಯುರೋಪು**

ನವೋತ್ಥಾನದಿಂದಾಗಿ ವೈಜ್ಞಾನಿಕ ರಂಗದುಲ್ಲುಂಟಾದ ಪ್ರಗತಿಯು ನೂತನ ಯಂತ್ರಗಳ ಸಂಶೋಧನೆಗೆ ಕಾರಣವಾಯಿತು. ಯಂತ್ರಗಳು ಉತ್ಪಾದನಾ ರಂಗದಲ್ಲಿ ದೊಡ್ಡ ಬದಲಾವಣೆಗಳನ್ನುಂಟು ಮಾಡಿದುವು. ಇದು ಉತ್ಪಾದನೆಯಲ್ಲಿ ಹತ್ತು ಮಡಿ ಹೆಚ್ಚಳ ಉಂಟಾಗಲೂ ಉತ್ಪಾದನಾ ವೆಚ್ಚವು ಕಡಿಮೆಯಾಗಲೂ ದಾರಿ ಮಾಡಿಕೊಟ್ಟಿತು. ಉತ್ಪಾದನಾ ರಂಗದಲ್ಲಿ ಉಂಟಾದ ಈ ರೀತಿಯ ಬದಲಾವಣೆಗಳನ್ನು ಕೈಗಾರಿಕಾ ಕ್ರಾಂತಿ ಎನ್ನುತ್ತಾರೆ. ಕೈಗಾರಿಕಾ ಕ್ರಾಂತಿಯು ಇಂಗ್ಲೇಂಡಿನಲ್ಲಿ ಆರಂಭವಾಯಿತು. ಈ ಉತ್ಪನ್ನಗಳಿಗಾಗಿರುವ ಮಾರುಕಟ್ಟೆಗಳನ್ನು ಹುಡುಕಿಕೊಂಡು ವಿವಿಧ ದೇಶಗಳಿಗಿರುವ ಸಮುದ್ರ ಸಾಹಸಿಕ ಯಾತ್ರೆಗಳು ಆರಂಭವಾಯಿತು. ಯುರೋಪಿಯನರು ಭಾರತಕ್ಕೆ ಆಗಮಿಸಿದುದೂ ಈ ಯಾತ್ರೆಗಳ ಭಾಗವಾಗಿಯೇ ಆಗಿತ್ತು.

**ಕೆಳಗೆ ನೀಡಿರುವ ಹೇಳಿಕೆಗಳನ್ನು ಓದಿ ದೇಶಗಳನ್ನು ಕಂಡುಹಿಡಿಯಲಾಗಿದೆ.**

- ಕೈಗಾರಿಕಾ ಕ್ರಾಂತಿಗೆ ಮುನ್ನುಡಿ ಬರೆದ ದೇಶ

- ನವೋತ್ಥಾನ ಆರಂಭವಾದ ದೇಶ

- ಸಮುದ್ರ ಮಾರ್ಗವಾಗಿ ಭಾರತಕ್ಕೆ ಮೊತ್ತ ಮೊದಲು ಭಾರತಕ್ಕೆ ಆಗಮಿಸಿದ ದೇಶ

- ಅತೀ ಹೆಚ್ಚು ಸಮಯ ಭಾರತದಲ್ಲಿ ಅಧಿಕಾರ ಸ್ಥಾಪಿಸಿದ ವಿದೇಶ

**ಚಟುವಟಿಕೆ – 2.1**

**ಕಲಿಕಾ ಸಾಧನೆ**

- ಮಧ್ಯಕಾಲೀನ ಭಾರತದ ಸಾಮಾಜಿಕ ಆರ್ಥಿಕ ಜೀವನವನ್ನು ವಿಶ್ಲೇಷಿಸುವುದು.

**ಆಶಯಗಳು**

ತರಗತಿ – 6 ಯೂನಿಟ್ – 2 ಮಧ್ಯಕಾಲೀನ ಭಾರತ ಸಂಪನ್ಮೂಲ – ವಿನಿಮಯ – ಸಮಾಜ

ತರಗತಿ – 7 ಯೂನಿಟ್ – 4 ನವಯುಗದತ್ತ ಭಾರತ

ತರಗತಿ – 7 ಯೂನಿಟ್ – 8 ನವಕೇರಳ ಸೃಷ್ಟಿಗಾಗಿ

**ಚಟುವಟಿಕಾ ಪ್ಯಾಕೇಜ್**

**ಅಗತ್ಯವಾದ ಸಾಮಾಗ್ರಿಗಳು**

ಓದಿನ ಟಿಪ್ಪಣಿ (ಅನುಬಂಧ – 7.5)

**ಚಟುವಟಿಕಾ ಪ್ರಕ್ರಿಯೆ**

**ಮಧ್ಯಕಾಲೀನ ಭಾರತದ ಮಹಿಳೆಯರು ಮತ್ತು ಸಮಾಜ**

ಬಾಲ್ಯ ವಿವಾಹ, ಸತಿ ಸಹಗಮನ ಪದ್ಧತಿ ದೇಶದ ಹಲವು ಭಾಗಗಳಲ್ಲಿ ನೆಲೆನಿಂತಿತ್ತು. ಹದಿನೇಳನೇ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ ಫ್ರೆಂಚ್ ಯಾತ್ರಿಕನಾದ ಫ್ರಾಂಕೋಯಿಸ್ ಬರ್ನಿಯರ್ ಸತಿ ಸಹಗಮನ ಪದ್ಧತಿಯನ್ನು ನೇರವಾಗಿ ನೋಡಿರುವುದಾಗಿ ಹೇಳಿರುತ್ತಾನೆ. ಪುನರ್ವಿವಾಹವನ್ನು ನಿರ್ಬಂಧಿಸಲಾಗಿತ್ತು. ಹೆಣ್ಣು ಮಕ್ಕಳು ಸಣ್ಣ ಪ್ರಾಯದಲ್ಲಿಯೇ ವಿವಾಹಿತರಾಗುವುದರಿಂದ ಅವರಿಗೆ ಶಿಕ್ಷಣ ಪಡೆಯುವುದಕ್ಕಿರುವ ಅವಕಾಶ ಲಭಿಸುತ್ತಿರಲಿಲ್ಲ.

ಮಧ್ಯಕಾಲೀನ ಭಾರತದಲ್ಲಿ ನೆಲೆನಿಂತಿದ್ದ ಅಸಮಾನತೆ ಮತ್ತು ಅನಾಚಾರಗಳು ವಿದೇಶಿ ಯಾತ್ರಿಕರ ಟಿಪ್ಪಣಿಗಳಿಂದ ಸ್ಪಷ್ಟವಾಗುವುದು.

ಸತಿಸಹಗಮನ ಪದ್ಧತಿ, ಬಾಲ್ಯ ವಿವಾಹ, ವಿಧವಾ ವಿವಾಹ ನಿಷೇಧ, ಮಹಿಳಾ ಶಿಕ್ಷಣದ ನಿಷೇಧ ಮೊದಲಾದವುಗಳು ಮಹಿಳೆಯರ ಪ್ರಗತಿಗೆ ತಡೆಯಾಗಿತ್ತು. 19ನೇ ಶತಮಾನದ ಹೊತ್ತಿಗೆ ಬೆಳೆಯ ತೊಡಗಿದ ನವೋತ್ಥಾನದ ಚಳುವಳಿಗಳು ಮತ್ತು ಇಂಗ್ಲಿಷ್ ಶಿಕ್ಷಣದ ವ್ಯಾಪಿಸುವಿಕೆ ಮಹಿಳೆಯರನ್ನು ಮುನ್ನೆಲೆಗೆ ಕೊಂಡೊಯ್ದಿತು.

ಮಧ್ಯಕಾಲದ ಮಹಿಳೆಯರ ಸ್ಥಿತಿಗಳಿಂದ ಮಹಿಳಾ ಸಬಲೀಕರಣದೆಡೆಗೆ ಸಾಗಿದ ಹಂತಗಳನ್ನು ಪಟ್ಟಿ ಮಾಡಿರಿ.

- ನವೋತ್ಥಾನದ ಚಳುವಳಿಗಳ ಚಟುವಟಿಕೆಗಳು
- 
- .

**ಚಟುವಟಿಕೆ – 2.2**

ಆಧುನಿಕ ಸಮಾಜ ಹಲವು ಕ್ಷೇತ್ರಗಳಲ್ಲಿ ಪ್ರಗತಿ ಹೊಂದಿದ್ದರೂ ಒಂದು ಪ್ರಗತಿ ಪರ ಸಮಾಜಕ್ಕೆ ಯೋಗ್ಯವಲ್ಲದ ಕೆಲವು ಚಟುವಟಿಕೆಗಳು ನಮ್ಮ ದೇಶದಲ್ಲಿ ವಿವಿಧ ಭಾಗಗಳಲ್ಲಿ ಕಂಡುಬರುತ್ತಿವೆ.

**ಜಾತಿ ವ್ಯವಸ್ಥೆ**

**ರೋಗ ಮುಕ್ತಿಗಾಗಿ ಅವೈಜ್ಞಾನಿಕ ಚಿಕಿತ್ಸೆ**

**ಆರ್ಥಿಕ ಅಭಿವೃದ್ಧಿಗಾಗಿ ನರಬಲಿ**

**ವಾಮಾಚಾರ**

ಮಾನವನ ಯುಕ್ತಿ ಚಿಂತನೆ, ತಿಳುವಳಿಕೆ ಮತ್ತು ವೈಜ್ಞಾನಿಕ ಚಿಂತನೆ ಇಲ್ಲದಾಗುವ ಇಂತಹ ನಂಬಿಕೆಗಳು ಸಾಮಾಜಿಕ ಅಸಮತೋಲನ ಸಮಾಜದಿಂದ ತೊಡೆದು ಹಾಕಬೇಕಲ್ಲವೇ? ಅಂತಹ ಚಟುವಟುಕೆಗೆಳು ಇಲ್ಲದಾಗಿಸಲು ಕಾನೂನುಗಳನ್ನು ಜಾರಿಗೊಳಿಸುವುದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ನಿಮ್ಮ ಸಲಹೆಗಳನ್ನು ದಾಖಲಿಸಿರಿ.

**ಚಟುವಟಿಕೆ 3.1**

**ಕಲಿಕಾ ಸಾಧನೆ**

1. ಅಕ್ಷಾಂಶ ರೇಖಾಂಶ ರೇಖೆಗಳನ್ನು ಉಪಯೋಗಿಸಿ ಭೂಮಿಯಲ್ಲಿ ಸ್ಥಾನ ನಿರ್ಣಯ ಮಾಡುವುದು.
2. ಭೂಖಂಡಗಳು ಮತ್ತು ಸಾಗರಗಳಿಗೆ ಸಂಬಂಧಿಸಿದ ನಿಗಮನಗಳನ್ನು ರೂಪೀಕರಿಸುವುದು.

**ಆಶಯಗಳು**

ತರಗತಿ – 4 ಯುನಿಟ್ –8 ಓದೋಣ ರಚಿಸೋಣ

ತರಗತಿ – 5 ಯುನಿಟ್ –6 ಭೂಖಂಡಗಳೂ ಸಾಗರಗಳೂ

ತರಗತಿ – 7 ಯುನಿಟ್ –1 ಪರಿವರ್ತನೆಯ ಹಾದಿಯಲ್ಲಿ

ತರಗತಿ – 7 ಯುನಿಟ್ –2 ವ್ಯಾಪಾರದಿಂದ ಅಧಿಕಾರಕ್ಕೆ

ತರಗತಿ – 7 ಯುನಿಟ್ –6 ಭೂಪಟಗಳ ಅರ್ಥವನ್ನು ಹುಡುಕಿ

**ಚಟುವಟಿಕಾ ಪ್ಯಾಕೆಜ್**

**ಅಗತ್ಯವಾದ ಸಾಮಾಗ್ರಿಗಳು**

- ಕ್ರಿಸ್ಟೋಫರ್ ಕೊಲಂಬಸ್, ವಾಸ್ಕೋಡ ಗಾಮ, ಮೆಗಲನ್ ಎಂಬವರ ಸಮುದ್ರ ಯಾನಗಳ ರೂಟ್ ಮ್ಯಾಪ್ (ಅನುಬಂಧ 7.6)
- ಅಟ್ಲಾಸ್ – ಗುಂಪಿಗೆ ಒಂದರಂತೆ
- ಗ್ಲೋಬ್ – ಗುಂಪಿಗೆ ಒಂದರಂತೆ
- ಸಾಗರಗಳ ಕುರಿತಾದ ವಿಶೇಷತೆಗಳು ಬರೆದ ಚೀಟಿಗಳು(ಅನುಬಂಧ 7.7)

**ಸಾಗರಗಳ ವಿಶೇಷತೆಗಳು**

ಜಗತ್ತಿನಲ್ಲಿ ಅತೀ ಹೆಚ್ಚು ಆಳವಾದ ಚಾಲೆಂಜರ್ ಡೀಪ್ ಕಂದಕವು ಈ ಸಾಗರದಲ್ಲಿದೆ.

ಜಗತ್ತಿನಲ್ಲಿ ಅತೀ ಹೆಚ್ಚು ಸಂಚಾರ ದಟ್ಟಣೆ ಇರುವ ಸಮುದ್ರ ಮಾರ್ಗ ಈ ಸಾಗರದ ಉತ್ತರ ಭಾಗದಲ್ಲಿದೆ.

ಒಂದು ದೇಶದ ಹೆಸರಿನಿಂದ ತಿಳಿಯಲ್ಪಡುವ ಸಾಗರ ಇದಾಗಿದೆ.

ಈ ಸಾಗರದ ಎರಡೂ ಭಾಗ ಸಾಧಾರಣ ಪೂರ್ಣವಾಗಿ ಶೈತ್ಯದಿಂದ ಕೂಡಿದೆ.

ಉತ್ತರಭಾಗವನ್ನು ಆವರಿಸಿರುವ ಸಾಗರ.

**ಚಟುವಟಿಕಾ ಪ್ರಕ್ರಿಯೆ**

ಸಾಗರಗಳ ವಿಶೇಷತೆಗಳು ಒಳಗೊಂಡ ಚೀಟಿಗಳನ್ನು ಎತ್ತಿ ಸಾಗರ ಯಾವುದೆಂದು ಕಂಡುಕೊಂಡು ಐದು ಗುಂಪುಗಳಾಗುವುದು. (ಫೆಸಿಫಿಕ್, ಅಟ್ಲಾಂಟಿಕ್, ಹಿಂದೂ ಮಹಾಸಾಗರ (ಇಂಡ್ಯನ್ ಓಶನ್), ಆರ್ಟಿಕ್, ಅಂಟಾರ್ಟಿಕ್)


ಬಯಲು ಹೊಳೆಯನ್ನು ದಾಟಬಹುದು
ಸಮುದ್ರಕ್ಕೆ ಸಮುದ್ರವ ಸುರಿಯಲು ಬಹುದು
ಹಿಂದಿನ ಕಾಲದ ಕೊಲಂಬಸ್ ಹೋದಂತೆ
ನಾವು ಹೊಸ ಲೋಕವ ಹುಡುಕಿ ಹೋಗಲು ಬಹುದು. (ಆಶಯದ ಅನುವಾದ)


**– ಎನ್.ವಿ ಕೃಷ್ಣವಾರಿಯರ್**


ತುರ್ಕಿಯರು ಕೋನ್‌ಸ್ಟಂಟಿನೋಪಲನ್ನು ಕೈವಶಪಡಿಸಿದುದು ಏಷ್ಯಾದ ದೇಶಗಳು ಮತ್ತು ಯುರೋಪಿಯನ್ ದೇಶಗಳ ಮಧ್ಯದ ವ್ಯಾಪಾರ ಸಂಬಂಧಕ್ಕೆ ತಡೆಯಾಗಿ ಪರಿಣಮಿಸಿತು.

ಹೊಸ ವಾಣಿಜ್ಯ ಮಾರ್ಗವನ್ನು ಹುಡುಕಲು ಇದು ಯುರೋಪಿಯನರಿಗೆ ಪ್ರೇರೆಪಿಸಿತು. ಹೊಸ ಸಮುದ್ರ ಮಾರ್ಗಗಳನ್ನು ಹುಡುಕಿ ಯುರೋಪಿಯನ್ ನಾವಿಕರು ಯಾತ್ರೆಗೆ ಸಿದ್ಧರಾದರು.

ಕ್ರಿಸ್ಟೋಫರ್ ಕೊಲಂಬಸ್, ವಾಸ್ಕಡ ಗಾಮ, ಮೆಗಲನ್ ಎಂಬವರ ಸಮುದ್ರ ಯಾನಗಳು ವಿಶ್ವ ಚರಿತ್ರೆಯನ್ನೇ ಬದಲಾಯಿಸಿತು.






ಗುಂಪಿಗೆ ನೀಡಿದ ರೂಟ್ ಮ್ಯಾಪ್ ಮತ್ತು ಅಟ್ಲಾಸ್‌ಗಳನ್ನು ನಿರೀಕ್ಷಿಸಿ ಇವರು ನಡೆಸಿದ ಸಾಹಸಿಕ ಯಾತ್ರೆ ಯಾವೆಲ್ಲಾ ಸಾಗರಗಳಲ್ಲಾಗಿತ್ತು ಎಂದು ಕಂಡುಕೊಂಡು ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ನಾವಿಕರು | ಸಂಚರಿಸಿದ ಸಾಗರಗಳು |
|---|---|
| ಕ್ರಿಸ್ಟೋಫರ್ ಕೊಲಂಬಸ್ | |
| ವಾಸ್ಕೋಡ ಗಾಮ | |
| ಮೆಗಲನ್ | |

**ಚಟುವಟಿಕೆ – 3.2**

ಸಾಗರಗಳ ಸಮೀಪವಿರುವ ಭೂಖಂಡಗಳನ್ನು ಗುರುತಿಸಿರಿ. (ಅನುಬಂಧ 7.7)


| ಸಾಗರ | ಭೂಖಂಡ |
|---|---|
| ಫೆಸಿಫಿಕ್ ಸಾಗರ | |
| ಅಟ್ಲಾಂಟಿಕ್ ಸಾಗರ | |
| ಹಿಂದೂ ಮಹಾಸಾಗರ (ಇಂಡಿಯನ್ ಓಷನ್) | |
| ಆರ್ಟಿಕ್ ಸಾಗರ | |
| ಅಂಟಾರ್ಟಿಕ್ ಸಾಗರ | |

**ಚಟುವಟಿಕೆ – 3.3**

ಏಳು ಗುಂಪುಗಳಾಗಿಸುವುದು. ಗ್ಲೋಬ್ ಮತ್ತು ಅಟ್ಲಾಸಿನ ಸಹಾಯದಿಂದ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸುವುದು.(ಅನುಬಂಧ – 7.7)

| ಭೂಖಂಡಗಳು | ಹೊಂದಿಕೊಂಡಿರುವ | ಸಾಗರ ನೆರೆಯ ಭೂಖಂಡಗಳು |
|---|---|---|
| 1. ಏಷ್ಯಾ | | |
| 2. ಆಫ್ರಿಕಾ | | |
| 3. ಉತ್ತರ ಅಮೇರಿಕಾ | | |
| 4. ದಕ್ಷಿಣ ಅಮೇರಿಕಾ | | |
| 5. ಅಂಟಾರ್ಟಿಕಾ | | |
| 6. ಯುರೋಪ್ | | |
| 7. ಆಸ್ಟ್ರೇಲಿಯಾ | | |

**ಅನುಬಂಧ 7.1**



## ಅನುಬಂಧ 7.2.1

### ಭೂಖಂಡಗಳ ವಿಶೇಷತೆಗಳು




**ಏಷ್ಯಾ**

ಏಷ್ಯಾ ಭೂಖಂಡವು ಗಾತ್ರದಲ್ಲಿ ಮತ್ತು ಜನಸಂಖ್ಯೆಯಲ್ಲಿ ಒಂದನೇ ಸ್ಥಾನದಲ್ಲಿರುವ ಭೂಖಂಡವಾಗಿದೆ. ಹಿಂದೂ ಮಹಾ ಸಾಗರದ ಉತ್ತರ ಭಾಗದಲ್ಲಿದೆ. ಧಾರಾಳ ಮಳೆ ಬೀಳುವ ಪ್ರದೇಶಗಳು, ವರ್ಷಪೂರ್ತಿ ಮಂಜು ಮುಸುಕುತಿರುವ ಪ್ರದೇಶಗಳು, ಅಧಿಕ ಉಷ್ಣತೆಯಿರುವ ಪ್ರದೇಶಗಳು ಹಾಗೂ ಮಿತವಾದ ಉಷ್ಣ ಮತ್ತು ತಂಪು ಅನುಭವಕ್ಕೆ ಬರುವ ಪ್ರದೇಶಗಳು ಮುಂತಾದ ಹಲವಾರು ಪ್ರಾಕೃತಿಕ ವಿಶೇಷತೆಗಳನ್ನು ಈ ಭೂಖಂಡದಲ್ಲಿ ಕಾಣಬಹುದು. ಜಗತ್ತಿನ ಅತಿ ಎತ್ತರದ ಪರ್ವತ ಶಿಖರವಾದ ಎವರೆಸ್ಟ್ ಈ ಭೂಖಂಡದಲ್ಲಿದೆ. ನಮ್ಮ ದೇಶವಾದ ಭಾರತ ಈ ಭೂಖಂಡದ ಭಾಗವಾಗಿದೆ. ಭತ್ತ, ಗೋಧಿ, ಜೋಳ ಮೊದಲಾದ ವಿವಿಧ ರೀತಿಯ ಬೆಳೆಗಳನ್ನು ಬೆಳೆಸುತ್ತಾರೆ. ಏಷ್ಯಾವು ಜಗತ್ತಿನಲ್ಲಿ ಅತ್ಯಧಿಕ ಭತ್ತ ಬೆಳೆಯುವ ಖಂಡವಾಗಿದೆ.




**ಆಫ್ರಿಕಾ**

ಗಾತ್ರದ ವಿಷಯದಲ್ಲಿ ಮತ್ತು ಆಫ್ರಿಕಾವು ಜಗತ್ತಿನ ಎರಡನೇ ಅತಿ ದೊಡ್ಡ ಭೂಖಂಡವಾಗಿದೆ. ಆಫ್ರಿಕಾ ಖಂಡವು ಹಿಂದೂ ಮಹಾ ಸಾಗರ ಹಾಗೂ ಅಟ್ಲಾಂಟಿಕ್ ಮಹಾ ಸಾಗರಗಳ ನಡುವೆ ಇದೆ. ಇದು ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಎರಡನೆಯ ಭೂಖಂಡವಾಗಿದೆ. ಇದರ ಹೆಚ್ಚಿನ ಭೂಭಾಗವು ಮರುಭೂಮಿಯಾಗಿರುವುದರಿಂದ ಕೃಷಿ ಯೋಗ್ಯವಾದ ಪ್ರದೇಶಗಳು ತುಂಬಾ ಕಡಿಮೆ. ಭೂಮಧ್ಯರೇಖೆಯ ಎರಡೂ ಭಾಗಗಳಲ್ಲಿ ವ್ಯಾಪಿಸಿಕೊಂಡಿರುವ ಸಹರಾ ಮರುಭೂಮಿಯು ಈ ಭೂಖಂಡದಲ್ಲಿದೆ. ಜಗತ್ತಿನ ಅತಿ ಉದ್ದದ ನದಿಯಾದ ನೈಲ್ ನದಿಯು ಈ ಭೂಖಂಡದ ಮೂಲಕ ಹರಿಯುತ್ತದೆ. ಜಗತ್ತಿನಲ್ಲಿ ಅತಿ ಹೆಚ್ಚು ವನ್ಯಜೀವಿ ಸಂಪತ್ತು ಹಾಗೂ ದಟ್ಟ ಅರಣ್ಯಗಳನ್ನು ಈ ಭೂಖಂಡದಲ್ಲಿ ಕಾಣಬಹುದು.

## ಅನುಬಂಧ – 7.2.2




### ಉತ್ತರ ಅಮೇರಿಕಾ


ಉತ್ತರ ಅಮೇರಿಕಾ ಭೂಮಿಯ ಉತ್ತರ ಭಾಗದಲ್ಲಿರುವ ಒಂದು ಭೂಖಂಡವಾಗಿದೆ. ಫೆಸಿಫಿಕ್ ಸಾಗರ ಹಾಗೂ ಅಟ್ಲಾಂಟಿಕ್ ಸಾಗರದ ನಡುವೆ ಈ ಭೂಖಂಡವಿದೆ. ಜಗತ್ತಿನ ಮೂರನೇ ಅತಿ ದೊಡ್ಡ ಭೂಖಂಡವಾಗಿದೆ. ಮಂಜು ಮುಸುಕಿದ ಭೂಪ್ರದೇಶದಲ್ಲಿ ವಾಸಿಸುವ ಜನಾಂಗವಾದ ಇನ್ಯೂಟ್ಟು (ಎಸ್ಕಿಮೊ) ಗಳು ಇಲ್ಲಿನ ವಿಶೇಷತೆ. ಅತ್ಯುನ್ನತ ಶಿಖರವಾದ ಮೌಂಟ್ ಮೆಕೆನ್ಲಿಯು ಅಲಸ್ಕಾ ಪರ್ವತ ಸಾಲಿನಲ್ಲಿದೆ. ಜಗತ್ತಿನ ಭೂಮೇಲ್ಮೈಯಲ್ಲಿ ಲಭ್ಯವಿರುವ ಶುದ್ಧಜಲದ ಸುಮಾರು 21% ವನ್ನು ಇಲ್ಲಿರುವ ಐದು ಮಹಾಸರೋವರಗಳು ಹೊಂದಿವೆ. ಇಲ್ಲಿನ ಹವಾಗುಣ ಹಾಗೂ ಮಣ್ಣು ಕೃಷಿಯೋಗ್ಯವಾಗಿದೆ. ಇಲ್ಲಿ ಪ್ರಪಂಚದಲ್ಲೇ ಅತಿ ಹೆಚ್ಚು ಗೋಧಿಯನ್ನು ಬೆಳೆಸುತ್ತಾರೆ.




### ದಕ್ಷಿಣ ಅಮೇರಿಕಾ

ದಕ್ಷಿಣ ಅಮೇರಿಕಾವು ಫೆಸಿಫಿಕ್ ಸಾಗರ ಹಾಗೂ ಅಟ್ಲಾಂಟಿಕ್ ಸಾಗರಗಳ ಮಧ್ಯದಲ್ಲಿದೆ. ವಿಸ್ತೀರ್ಣದ ಆಧಾರದಲ್ಲಿ ದಕ್ಷಿಣ ಅಮೇರಿಕಾಕ್ಕೆ ನಾಲ್ಕನೇ ಸ್ಥಾನವಿದೆ. ಜಗತ್ತಿನಲ್ಲೇ ಅತಿ ಹೆಚ್ಚು ಶುದ್ಧ ಜಲವನ್ನು ಹೊಂದಿರುವ ನದಿಯಾದ ಅಮೆಜೋನ್ ಈ ಭೂಖಂಡದಲ್ಲಿ ಹರಿಯುತ್ತದೆ. 'ಅಕೋಂಕುಗುವಾ' ಶಿಖರವು ಈ ಭೂಖಂಡದ ಅತ್ಯಂತ ಎತ್ತರದ ಪರ್ವತ ಶಿಖರವಾಗಿದೆ. ಅಮೇರಿಕಾದ ಉತ್ತರ ಭಾಗದಲ್ಲಿರುವ ಅಮೆಜೋನ್ ನದೀ ದಡದಲ್ಲಿರುವ ದಟ್ಟ ಅರಣ್ಯದಲ್ಲಿ ವೈವಿಧ್ಯಮಯವಾದ ಸಸ್ಯವರ್ಗಗಳು ಹಾಗೂ ಜೀವಿಗಳು ಕಂಡುಬರುತ್ತದೆ. ಜಾನುವಾರು ಸಾಕಣೆಯು ಇಲ್ಲಿನ ಜನರ ಪ್ರಧಾನ ಕಸುಬಾಗಿದೆ.

## ಅನುಬಂಧ — 7.2.3




### ಅಂಟಾರ್ಟಿಕಾ

ಅಂಟಾರ್ಟಿಕಾವು ಭೂಮಿಯ ದಕ್ಷಿಣ ತುದಿಯಲ್ಲಿರುವ ಭೂಖಂಡವಾಗಿದೆ. ವಿಸ್ತೀರ್ಣದ ಆಧಾರದಲ್ಲಿ ಐದನೇಯ ಸ್ಥಾನವನ್ನು ಹೊಂದಿದೆ. ಇದು ಜಗತ್ತಿನಲ್ಲಿ ಅತ್ಯಧಿಕ ಶೈತ್ಯವನ್ನು ಹೊಂದಿರುವ ಭೂಪ್ರದೇಶವಾಗಿದೆ. ವರ್ಷ ಪೂರ್ತಿ ಮಂಜು ಮುಸುಕಿರುವುದರಿಂದ ಇದನ್ನು ಶ್ವೇತ ಭೂಖಂಡವೆಂದು ಕರೆಯಲಾಗುತ್ತದೆ. ಅತ್ಯಧಿಕ ಖನಿಜ ಸಂಪತ್ತುಗಳ ನಿಕ್ಷೇಪವು ಈ ಭೂಖಂಡದಲ್ಲಿದೆ. ಅವುಗಳ ಸಂಶೋಧನೆಗಳಿಗಾಗಿಯೂ ಹವಾಮಾನ ಅಧ್ಯಯನಕ್ಕಾಗಿಯೂ ಹಲವು ದೇಶಗಳು ಇಲ್ಲಿ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿವೆ. ಮೈತ್ರಿ ಹಾಗೂ ಭಾರತಿ ಎಂಬಿವುಗಳು ಅಂಟಾರ್ಟಿಕಾದಲ್ಲಿರುವ ಭಾರತೀಯ ಸಂಶೋಧನಾ ಕೇಂದ್ರಗಳಾಗಿವೆ.




### ಯುರೋಪ್

ವಿಸ್ತೀರ್ಣದ ಆಧಾರದಲ್ಲಿ ಆರನೇ ಸ್ಥಾನದಲ್ಲಿರುವ ಯುರೋಪ್ ಭೂಖಂಡವು ಅಟ್ಲಾಂಟಿಕ್ ಸಾಗರ ಹಾಗೂ ಏಷ್ಯಾ ಭೂಖಂಡದ ಮಧ್ಯೆ ಇದೆ. ಯುರಾಲ್ ಪರ್ವತ ಶ್ರೇಣಿಯು ಯುರೋಪನ್ನು ಏಷ್ಯಾ ಭೂಖಂಡದಿಂದ ಪ್ರತ್ಯೇಕಿಸುತ್ತದೆ. ಜನಸಂಖ್ಯೆಯಲ್ಲಿ ಮೂರನೇ ಸ್ಥಾನದಲ್ಲಿರುವ ಈ ಭೂಖಂಡದ ದಕ್ಷಿಣ ಭಾಗದಲ್ಲಿ ಸಮಶೀತೋಷ್ಣದ ಅನುಭವ ಉಂಟಾದರೆ ಉತ್ತರ ಭಾಗದಲ್ಲಿ ಅತಿ ಶೈತ್ಯದ ಅನುಭವ ಉಂಟಾಗುತ್ತದೆ. ಕೈಗಾರಿಕೆಯಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿದೆ. ಮೀನುಗಾರಿಕೆ ಇಲ್ಲಿನ ಜನರ ಒಂದು ಪ್ರಧಾನ ಕಸುಬಾಗಿದೆ.




## ಆಸ್ಟ್ರೇಲಿಯಾ

ಓಶ್ಯಾನಿಯಾ ಎಂಬ ಹೆಸರಿನಿಂದ ಕರೆಯಲ್ಪಡುವ ಆಸ್ಟ್ರೇಲಿಯಾ ಭೂಖಂಡ ಪ್ರಪಂಚದ ಅತಿ ಚಿಕ್ಕ ಭೂಖಂಡವಾಗಿದೆ. ಸಂಪೂರ್ಣವಾಗಿ ಜಲಾವೃತಗೊಂಡಿರುವ ಇದು ಭೂಖಂಡ ದ್ವೀಪವಾಗಿದೆ. ಮೊಟ್ಟೆ ಇಡುವ ಸಸ್ತನಿಯಾದ ಪ್ಲಾಟಿಪಸ್, ಸಂಚೀಮೃಗ ಎಂದು ಕರೆಯುವ ಕಾಂಗರೂ, ಶ್ವಾನವರ್ಗಕ್ಕೆ ಸೇರಿದ ಡಿಂಕೊಕಲ್ ಮೊದಲಾದವುಗಳು ಈ ಭೂಖಂಡದಲ್ಲಿ ಮಾತ್ರ ಕಾಣಸಿಗುತ್ತದೆ. ಇಲ್ಲಿ ಗೋಧಿಯನ್ನು ಧಾರಾಳ ಕೃಷಿ ಮಾಡುತ್ತಾರೆ.

## ಅನುಬಂಧ — 7.3

### ಭೂಖಂಡಗಳ ವಿಶೇಷತೆಗಳು ಚೀಟಿಗಳು

| |
|---|
| ಅತಿ ದೊಡ್ಡ ಭೂಖಂಡ.<br>ನಮ್ಮ ದೇಶ ಭಾರತ ಈ ಭೂಖಂಡದಲ್ಲಿ ಒಳಗೊಂಡಿರುವುದು. |

| |
|---|
| ಈ ಭೂಖಂಡದ ಹೆಚ್ಚಿನ ಪ್ರದೇಶಗಳು ಮರುಭೂಮಿಯಾಗಿದೆ.<br>ನೈಲ್ ನದಿ ಈ ಭೂಖಂಡದ ಮೂಲಕ ಹರಿಯುವುದು. |

| |
|---|
| ವಿಶ್ವದಲ್ಲಿ ಅತಿ ಹೆಚ್ಚು ಗೋಧಿಯನ್ನು ಬೆಳೆಯುವುದು ಈ ಭೂಖಂಡದಲ್ಲಾಗಿದೆ.<br>ಪಂಚ ಮಹಾ ಸರೋವರಗಳು ಈ ಭೂಖಂಡದಲ್ಲಿದೆ. |


| |
|---|
| ಅಮೆಜೋನ್ ನದಿ ಈ ಭೂಖಂಡದಲ್ಲಿದೆ.<br>ಈ ಭೂಖಂಡ ಮರಗೆಣಸಿನ ತಾಯ್ನಾಡಾಗಿದೆ. |

| |
|---|
| ಜಗತ್ತಿನಲ್ಲಿ ಅತಿ ಹೆಚ್ಚು ಶೈತ್ಯವನ್ನು ಹೊಂದಿದ ಪ್ರದೇಶ.<br>ಶ್ವೇತ ಭೂಖಂಡ ಎಂದು ತಿಳಿಯಲ್ಪಡುತ್ತದೆ. |


| |
|---|
| ಯುರಾಲ್ ಪರ್ವತ ಶ್ರೇಣಿಯು ಈ ಭೂಖಂಡವನ್ನು ಏಷ್ಯಾದಿಂದ ಪ್ರತ್ಯೇಕಿಸುವುದು.<br>ಕೈಗಾರಿಕೆಯಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿದೆ. |

| |
|---|
| ಪ್ಲಾಟಿಪಸ್, ಕಾಂಗರೂ, ಡಿಂಕೋಕಲ್ ಮೊದಲಾದವು ಈ ಭೂಖಂಡದಲ್ಲಿ ಮಾತ್ರ ಕಾಣಸಿಗುತ್ತದೆ.<br>ದ್ವೀಪ ಭೂಖಂಡ ಎಂದು ತಿಳಿಯಲ್ಪಡುತ್ತದೆ. |

**ಅನುಬಂಧ — 7.4**



WORLD MAP
Canada
United States of America
Greenland (Denmark)
Russia
China
India
Australia
Brazil
Kazakhstan
Mongolia
Prime Meridian
Arctic Circle
Tropic of Cancer
Equator
Tropic of Capricorn
Antarctic Circle

**ಅನುಬಂಧ – 7.5.1**




Christopher Columbus' Voyages
Hudson Bay
NORTH AMERICA
Mississippi River
Saint Lawrence River
Gulf of Mexico
PACIFIC OCEAN
ATLANTIC OCEAN
SOUTH AMERICA
EUROPE
AFRICA
N
S
E
W
1492-1493
1493-1496
1502-1504
1498-1500
0 500 1,000 miles
0 500 1,000 kilometers

## ಅನುಬಂಧ — 7.5.2



Vasco da Gama's First Voyage to India, 1497-99
PORTUGAL
Lisbon
Azores
Canary Is.
Cape Verde Is.
St. Helena
ATLANTIC OCEAN
Elmina
AFRICA
Mediterranean Sea
Alexandria
Cairo
ARABIA
Aden
Caspian Sea
Hormuz
Arabian Sea
Diu
Goa
INDIA
Cannanore
Calicut
Cochin
Mogadishu
Malindi
Kilwa
Mozambique
Sofala
Madagascar
Cape of Good Hope
INDIAN OCEAN
0 500 1000 mi
0 800 1600 km
Vasco da Gama's route
A COMPTON'S MAP

ಅನುಬಂಧ – 7.5.3


Magellan's route
1521 – Magellan is killed; Sebastian del Cano takes over remaining route
NORTH AMERICA
Pacific Ocean
SOUTH AMERICA
Atlantic Ocean
Spain
Start 1519
end 1522
EUROPE
AFRICA
ASIA
Indian Ocean
AUSTRALIA

## ಅನುಬಂಧ — 7.6

### ಸಾಗರದ ವಿಶೇಷತೆಗಳು

| |
|---|
| ಜಗತ್ತಿನಲ್ಲಿ ಅತಿ ಹೆಚ್ಚು ಆಳವಾದ ಚಾಲೆಂಜರ್ ಡೀಪ್ ಕಂದಕವು ಈ ಸಾಗರದಲ್ಲಿದೆ. |


| |
|---|
| ಜಗತ್ತಿನಲ್ಲಿ ಅತಿ ಹೆಚ್ಚು ಸಂಚಾರ ದಟ್ಟಣೆ ಇರುವ ಸಮುದ್ರ ಮಾರ್ಗ ಈ ಸಾಗರದ ಉತ್ತರ ಭಾಗದಲ್ಲಿದೆ. |

| |
|---|
| ಒಂದು ದೇಶದ ಹೆಸರಿನಿಂದ ತಿಳಿಯಲ್ಪಡುವ ಸಾಗರ ಇದಾಗಿದೆ. |

| |
|---|
| ಈ ಸಾಗರದ ಎರಡೂ ಭಾಗ ಸಾಧಾರಣ ಪೂರ್ಣವಾಗಿ ಶೈತ್ಯದಿಂದ ಕೂಡಿದೆ. |

| |
|---|
| ಉತ್ತರ ಭಾಗವನ್ನು ಆವರಿಸಿರುವ ಸಾಗರ. |

**ಅನುಬಂಧ – 7.7**


NORTH PACIFIC OCEAN
SOUTH PACIFIC OCEAN
NORTH ATLANTIC OCEAN
SOUTH ATLANTIC OCEAN
INDIAN OCEAN
SOUTHERN OCEAN
ARCTIC OCEAN
CANADA
UNITED STATES
MEXICO
BRAZIL
ARGENTINA
CHILE
PERU
COLOMBIA
BOLIVIA
ALGERIA
LIBYA
EGYPT
MALI
NIGER
CHAD
SUDAN
ANGOLA
RUSSIA
KAZAKHSTAN
MONGOLIA
CHINA
INDIA
IRAN
TURKEY
AUSTRALIA
INDONESIA
MADAGASCAR
ANTARCTICA
© Nations Online Project